ಜಮೀನಿನ ವಿಷಯವನ್ನು ಪ್ರಸ್ತಾಪಿಸಿದಾಗ ಕೈನಲ್ಲಿ ಕೊಟ್ಟು ಬಿಡಿ ಎಂಬಂತೆ ಸನ್ನೆ ಮಾಡಿದ್ದರು. ಮಗ ಪ್ರತಾಪಸಿಂಹರೆಡ್ಡಿಯ ವಿದ್ಯಮಾನಗಳಿಂದ ವೀರಾಂಜನೇಯರೆಡ್ಡಿ ವಿಪರೀತ ಕುಗ್ಗಿ ಹೋದಂತೆ ಕಾಣುತ್ತಿದ್ದರು. ಅದು ಮುಖದಲ್ಲಿ ಅಸಹನೆಯನ್ನು ಹುಟ್ಟಿ ಹಾಕಿತ್ತು. ನರಸಿಂಹರೆಡ್ಡಿಯ ಕಡೆ ನೋಡಿ, “ಹಾಳು ಮಾಡಿದ್ರಿ ನೀವೆಲ್ಲ ಸೇರಿ ಅವನನ್ನ. ನಾನು ಬೇಡಬೇಡವೆಂದರೂ ಅವನನ್ನು ಮುಂಬಯಿಗೆ ಓದಲು ಕಳಿಸಿ ದೊಡ್ಡ ತಪ್ಪು ಮಾಡಿಬಿಟ್ರಿ. ಇಲ್ಲೆ ಬಿದ್ದಿದ್ದರೆ ಏನಾಗ್ತಿತ್ತು ಯಂಗೂ ಶಿಪ್ಪಿಂಗ್ ಕಂಪನೀಲಿ ಡೈರೆಕ್ಟರ್ ಆಗಿದ್ದ. ಜಾಸ್ತಿ ಓದ್ದೋನು ಯಾವೋನು ಒಳ್ಳೆ ವಿದ್ಯೆ ಕಲ್ತವ್ನೆ, ಯಾವೋನು ನೆಮ್ಮದಿಯಾಗವ್ನೆ. ಈಗ ನೋಡ್ರಿ ಮನೆತನದ ಗೌರವ ಹಾಳಾಗಿ ಹೋಯ್ತು. ಟೀವಿಲಿ, ಪೇಪರಿನಲ್ಲಿ ಬಂದ ಮೇಲೆ ಈ ಹದಿನೈದು ದಿನಗಳಿಂದ ನಾನು ಹೊರಗಡೆ ಹೋಗ್ಲಿಲ್ಲ. ನಿನ್ನೆ ಮಹಾಲಯ ಅಮಾವಾಸ್ಯೆನೂ ಸರಿಯಾಗಿ ಮಾಡೋಕಾಗ್ಲಿಲ್ಲ. ಎಲ್ರೂ ಎಂಥೋರ ಮಗ ಯಂಗಾಗೋದ ಅಂಥ ಮಾತನಾಡೋರೆ ಕಂತ್ರಿ ನನ್ಮಕ್ಳು. ಒಂದ್ರೀತಿ ಭಯ ಸುತ್ಕೊಂಡೈತೆ. ಭಯ ಹುಟ್ಟಿದ್ರೆ ಮುಗೀತು. ಸಾವು ಹತ್ರ ಬರ್ತಾ ಇದೆ ಅಂತಾಲೇ ಲೆಕ್ಕ. ಭಯವನ್ನು ಸಾಯಿಸಿ ಬದುಕ್ಬೋರು ನಾವು. ಯಾರಿಗೂ ಫೋನು ಕೂಡ ಮಾಡ್ಲಿಲ್ಲ. ಪ್ರತಾಪ ಇಲ್ಲೆ ಇದ್ದು ಒಂದೆರಡು ಖೂನಿ ಮಾಡಿದ್ರೂ ನಂಗೆ ಇಷ್ಟು ಬೇಜಾರು ಆಗ್ತಿರ್ಲಿಲ್ಲ...” ಎಂದು ಗೊಣಗಿದ್ದರು. ಅಣ್ಣನ ಕೈ ಹಿಡಿದು ನರಸಿಂಹರೆಡ್ಡಿ, “ಅಣ್ಣಾ ಸಮಾಧಾನ ಮಾಡ್ಕೊ ಅಣ್ಣಾ. ಒಳ್ಳೇದಾಗ್ತದೆ. ಸತ್ಯನಾರಾಯಣ ಸ್ವಾಮಿ, ನರಸಿಂಹ ಸ್ವಾಮಿ, ಆಂಜನೇಯ ಸ್ವಾಮಿ ಕೈ ಬಿಡಲ್ಲ...” ಎಂದು ಮಗುವಿನಂತೆ ಅಲವತ್ತುಕೊಳ್ಳುತ್ತಿದ್ದರು. ನಾನೂ ವೇಮುಲಶಾಸ್ತ್ರಿ ವೀರಾಂಜನೇಯರೆಡ್ಡಿಗೆ ಕೈಮುಗಿದು ಅಲ್ಲಿಂದ ಹೊರಟೆದ್ದೆವು. “ಯಜ್ಞಂ ಮರಣಂ; ಯಜ್ಞಂ ಮರಣಂ; ಯಜ್ಞಂ ಮರಣಂ” ಎಂದು ವೀರಾಂಜನೇಯರೆಡ್ಡಿ ನರಸಿಂಹರೆಡ್ಡಿಗೆ ಹೇಳುತ್ತಿದ್ದ ಮಾತುಗಳು ನನ್ನ ಕಿವಿಯಲ್ಲಿ ನುಸುಳಿದ್ದರೂ ಅದರ ಮೂಲಾರ್ಥ ನನ್ನ ಮನಸ್ಸಿಗೆ ಇಳಿದಿರಲಿಲ್ಲ.

“ವೀರಾಂಜನೇಯರೆಡ್ಡಿಯಿರುವ ಈ ಕೊಠಡಿ ಹುಡುಕಲು ಹೊಸಬರಿಗೆ ವಾರವಾದರೂ ಆಗುವುದಿಲ್ಲ. ಅದೆಂಥದ್ದೊ ಇಂದ್ರಚಾಪ (ರೈಂಬೊ) ಟೆಕ್ನಾಲಜಿಯನ್ನು ಆ ರೂಮಿಗೆ ಅಳವಡಿಸಲಾಗಿದೆಯಂತೆ. ಅಂದರೆ ಒಂದು ಸಾರಿ ಕಂಡಂತೆ ಇನ್ನೊಂದು ಸಾರಿ ಕಾಣುವುದಿಲ್ಲವಂತೆ. ಇಂದ್ರಜಾಲ ವಿದ್ಯೆ ಕಲಿತಿದ್ದ ನರಸಿಂಹರೆಡ್ಡಿಯ ತಾತನ ತಮ್ಮ ಅದರ ಎಂಜಿನಿಯರಿಂಗ್ ಮಾಡಿದ್ದಂತೆ! ಕೊನೆಗಾಲದಲ್ಲಿ ಆತ ಇಂದ್ರಜಾಲಕ್ಕೆ ಸಂಬಂಧ ಪಟ್ಟ ಪುಸ್ತಕಗಳನ್ನು ಸುಟ್ಟು ಹಾಕಿದರಂತೆ. ಸುಡುವಾಗ ಕೆಲವು ಪುಸ್ತಕಗಳು ಹದಿನೈದು ಇಪ್ಪತ್ತು ಅಡಿ ಮೇಲಕ್ಕೆ ಹಾರಿದ್ದವಂತೆ. ಅಂಥ ಅನೇಕ ಕಥೆಗಳು ಈ ಮನೆಯಲ್ಲಿರುವ ಬಗ್ಗೆ ಜನ ಮಾತನಾಡಿಕೊಳ್ತಾರೆ...” ಅಲ್ಲಿಂದ ಅತಿಥಿ ರೂಮಿಗೆ ಬರುವ ಸಮಯದಲ್ಲಿ ಹೇಳಿದ್ದ ವಿಶ್ವನಾಥ ವೇಮುಲಶಾಸ್ತ್ರಿಯ ಮಾತುಗಳು ಅಷ್ಟೇನೂ ಕಠೋರವಲ್ಲದ ವಿಚಿತ್ರ ರೀತಿಯ ಭೀತಿಯನ್ನು ಹುಟ್ಟಿಸಿದ್ದವು.

“ಈ ಮನೆಯಲ್ಲಿ ನೂರ ಐದು ವರ್ಷದ ಜೀವವೊಂದು ಉಸಿರಾಡುತ್ತಿದೆ. ನರಸಿಂಹರೆಡ್ಡಿಯವರ ತಾತ ರಾಮರೆಡ್ಡಿಯವರ ಹೆಂಡತಿ. ರೆಡ್ಡಿ ನಾಗಮ್ಮ ಆಕೆಯ ಹೆಸರು. ಆಕೆಯ ಗಂಡ ಸತ್ತು ನಲವತ್ತು ವರ್ಷಗಳ ಮೇಲಾಯಿತಂತೆ. ಗಂಡ ಸತ್ತಾಗಿನಿಂದ ಆಕೆ ಕಣ್ಣು ಮುಚ್ಚಿ ನಿದ್ದೆ ಮಾಡಿಲ್ಲವಂತೆ. ಹತ್ತು ವರ್ಷಗಳ ಹಿಂದೆ ಬಿಬಿಸಿಯ ವರದಿಗಾರರು ಇಪ್ಪತ್ತು ದಿನ ಇದ್ದು ಪರೀಕ್ಷಿಸಿ ಲೈವ್ ರಿಪೋರ್ಟ್ ಮಾಡಿ ಹೋಗಿದ್ದರು. ಇವೊತ್ತಿಗೂ ಒಳ್ಳೆ ಊಟ ಮಾಡ್ತಾರಂತೆ. ಮೊದಲೆಲ್ಲ ಹೊರಗೆ ಕಾಣಿಸಿಕೊಳ್ಳುತ್ತಿದ್ದರು. ಈಗ ಅಷ್ಟಾಗಿ ಹೊರಗೆ ಬರುವುದಿಲ್ಲ. ಆಕೆಯನ್ನು ನೋಡಿಕೊಳ್ಳಲು ಸದಾ ಇಬ್ಬರು ಜನರಿರುತ್ತಾರೆ. ಈಗಲೂ ದಿನಾ ಒಂದಿಷ್ಟು ಬ್ರಾಂದಿ ಕುಡಿಯುವುದಲ್ಲದೆ ದಿನವೂ ಐದಾರು ಸಿಗರೇಟು ಸುಡುತ್ತಾರಂತೆ. ಆಕೆಯನ್ನು ನೋಡಿದ ಎಲ್ಲಾ ಡಾಕ್ಟರುಗಳು ಮೂತಿಯ